(*c*) Estimate is prepared for Rs. 7.95 lakhs.

(*d*) The projeet is infeasible.

(*e*) Does not arise in view of reply to clause (*d*),

ಶ್ರೀ ಟಿ. ತಾರೇಗೌಡ —ಕೆರೆಯ ಅಂದಾಜನ್ನು ತಯಾರು ಮಾಡಿರುವಾಗ ಆದು ಎಷ್ಟು ಎಕರೆ ಆಚ್ಚುಕಟ್ಟಿಗೆ ಅಂದಾಜಾಗುತ್ತದೆ?

† ಎಚ್.ಸಿ. ಶ್ರೀಕಂಠಯ್ಯ.—795 ಲಕ್ಷ ರೂಪಾಯಿಗಳ ಅಂದಾಜನ್ನು ಮಂಜೂರು ಮಾಡ ಲಾಗಿರುವುದರಿಂದ, ಆದು 216 ಎಕರೆಗಳಷ್ಟು ಆಚ್ಚುಕಟ್ಟಿಗೆ ಏನು ಅಂದಾಜು ಮಾಡಿದ್ದಾರೋ ಆದು ಈ ಒಂದು ಪ್ರಾಜೆಕ್ಟ್‌ಗೆ ಫೀಜಿಬಿಲ್ ಆಗಿಲ್ಲದೆ ಇರುವುದರಿಂದ ಇದನ್ನು ತಗೆದುಕೊಳ್ಳುವುದಕ್ಕಾಗಿಲ್ಲ.

ಶ್ರೀ ಟಿ. ತಾರೇಗೌಡ.—ಕೆರೆ ಮಂಜೂರಾಗುವುದಕ್ಕೆ ಯಾವ ಉದ್ದೇಶದಿಂದ ಸಾಧ್ಯವಾಗಿಲ್ಲವೆಂದು ಹೇಳುತ್ತೀರಿ? ಇದರ ಕೆಳಗೆ ಇರುವ ಸುತ್ತಿನಕಟ್ಟೆ ಕೆರೆ ಮತ್ತು ಗಿಣಿವಜ್ರ ಕೆರೆಯನ್ನು ಹೊಸದಾಗಿ ಕಟ್ಟುವ ಸ್ಥಳಕ್ಕೂ ಎಷ್ಟು ದೂರ ಅಂತರವಿದೆ?

ಶ್ರೀ ಎಚ್.ಸಿ ಶ್ರೀಕಂಠಯ್ಯ.—ನಮಗೆ ಬಂದಿರುವ ವರದಿ ಪ್ರಕಾರ ಆದನ್ನು ಕೊಡಬಹುದು. ಆದರಿಂದ ಸಾಕಷ್ಟು ನೀರು ಬರುವುದಿಲ್ಲ. ಆದ್ದರಿಂದ ಅಲ್ಲಿನವರೆಗೆ ತೊಂದರೆಯಾಗುತ್ತದೆ. ಅಲ್ಲಿ ಒಂದು ಎಕರೆಗೆ 3600 ರೂಪಾಯಿಗಳವರೆಗೆ ಆಗುವುದರಿಂದ, ಆದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ ಬೈರಪ್ಪಾಜಿ,—ಒಂದು ಎಕರೆಗೆ 3600 ರೂಪಾಯಿಗಳಷ್ಟು ಖರ್ಚಾಗುತ್ತದೆಂದರೆ ಆದು ಬಹಳ ಕಾಸ್ಟ್ಲಿ ಆಗುತ್ತದೆಂದು ಇಲ್ಲಿ ಹೇಳಿದ್ದಾರೆ. ವರ್ಷೇ ವರ್ಷೇ ಕೆರೆಯ ಪೆಡ್ಯೂಲ್ ರೇಟ್ ಜಾಸ್ತಿ ಯಾಗುತ್ತಲೇ ಇರುತ್ತದೆ. ಹೊಸ ಕೆರೆಗಳನ್ನು ನಿರ್ಮಾಣ ಮಾಡುವಾಗ ಈಗ ಇರತಕ್ಕ ಅನೇಕ ಕೆರೆಗಳನ್ನು ಕೈಬಿಡುವ ಪ್ರಸಂಗಗಳೂ ಇವೆ, ಆದಕ್ಕೆ ಬೇಕಾದಷ್ಟು ಉದಾಹರಣೆಗಳೂ ಇವೆ. ಆದ್ದರಿಂದ ಬಹಳ ಹಿಂದೆ ತೀರ್ಮಾನ ಮಾಡಿದ ಪ್ರಕಾರ ಒಂದು ಎಕರೆಗೆ 2500 ರೂಪಾಯಿಗಳಿಗಿಂತ ಮಿನಿಮಂ ಸೀಲಿಂಗ್ ಲಿಮಿಟ್ ಇಟ್ಟುಕೊಂಡು ಒಂದು ಎಕರೆಗೆ 4 ಸಾವಿರ ರೂಪಾಯಿಗಳವರೆಗೆ ಮ್ಯಾಗ್ನಿಮಂ ಸೀಲಿಂಗ್ ಮಾಡ ಬಹುದು. ಆ ರೀತಿಯಾಗಿ ಅಲ್ಲಿಯೂ ಹೆಚ್ಚುಮಾಡಿ ಈ ಕೆರೆಗಳಿಂದ ನೀರು ಹೆಚ್ಚಿಗೆ ಬರುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಖಂಡಿತವಾಗಿ ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ ತಾರೇಗೌಡ —ಇದು ಬರಗಾಲದಿಂದ ತತ್ತರಿಸಿ ಜನಜೀವನಕ್ಕೆ ತೊಂದರೆಯಾಗಿರುವ ಪ್ರದೇಶ ವಾಗಿರುವುದರಿಂದ ಅಲ್ಲಿನ ಆಚ್ಚುಕಟ್ಟುದಾರರು ಇದರ ಬಗ್ಗೆ ಒಂದು ಆಶೆ-ಆಕಾಂಕ್ಷೆಯನ್ನು ಇಟ್ಟು ಕೊಂಡಿರುವುದರಿಂದ ಮಾನ್ಯ ಶ್ರೀ ಬೈರಪ್ಪಾಜಿಯವರು ಹೇಳಿದಂತೆ ಮೂರುವರೆ ಸಾವಿರದಿಂದ ನಾಲ್ಕು ಸಾವಿರದಂತೆ ಒಂದು ಎಕರೆಗೆ ಖರ್ಚುಮಾಡಿ ಇಂತಹ ಕ್ಷಾಮ ಪ್ರದೇಶಕ್ಕೆ ವಿಶೇಷ ರಿಯಾಯತಿಯನ್ನು ತೋರಿಸುವುದಕ್ಕಾಗುತ್ತದೆಯೇ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಇದನ್ನು ಮಂಜೂರು ಮಾಡುವುದಕ್ಕೆ ಅಲ್ಲಿ ಕಾಸ್ಟ್ಲಿ ಬಹಳ ಜಾಸ್ತಿಯಾಗುತ್ತದೆ. ಈ ಕೆರೆಯನ್ನು ಕಟ್ಟುವುದರಿಂದ ಆದರ ಕೆಳಗೆ ಇರತಕ್ಕ ಎರಡು ಕೆರೆಗಳಿಗೆ ಬಹಳ ತೊಂದರೆಯಾಗುತ್ತದೆ. ಅದಲ್ಲದೆ ಇದು ಫೀಜಿಬಿಲ್ ಅಲ್ಲವೆಂದು ಬೇರೆ ವರದಿ ಬಂದಿದೆ. ಕ್ಷಾಮ ಪರಿಹಾರ ಕೆಲಸಗಳಲ್ಲಿ ಮೈನರ್ ಇರ್ರಿಗೇಷನ್ ವರ್ಕ್ಸ್‌ಗೆ 20 ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರು ಮಾಡಿದ್ದೇವೆ. ಎರಡು ಲಕ್ಷ ರೂಪಾಯಿಗಳಷ್ಟು ಖರ್ಚುಮಾಡಿ ಅಲ್ಲಿನ ಎಲ್ಲಾ ಭಾಗಗಳಲ್ಲಿಯೂ ಕೆಲಸ ಗಳನ್ನು ತೆಗೆದುಕೊಂಡಿದ್ದೇವೆ. ಆದ್ದರಿಂದ ಈಗ ಈ ಕೆರೆಯ ಪ್ರಶ್ನೆ ಸಾಧ್ಯವಾಗುವುದಿಲ್ಲ.

Castewar Particulars of Govt. Employees

186 SRI K. SIDDAIAH (Santhemarahally).—Will the Chief Minister be pleased to state:—

(*a*) whether Government are maintaining Castewar and Community-war particulars regarding the employees in the State Civil Service;

(*b*) if not, whether ther is any proposal to maintain the caste and community war particulars for purpose of periodical review in the State Civil Service?

SRI D. DEVARAJ URS (Chief Minister).—

(*a*) No.

(*b*) No.

ಶ್ರೀ ಕೆ. ಸಿದ್ದಯ್ಯ. - ರಾಜ್ಯದ ಸಿವಿಲ್ ಸೇವೆಯಲ್ಲಿರುವ ನೌಕರರ ಜಾತಿ ಹಾಗೂ ಕೋಮುವಾರು ವಿವರಗಳನ್ನು ಸರ್ಕಾರವವರು ನಿರ್ವಹಿಸಿದ್ದಾರೆಯೇ ಎಂದರೆ ಇಲ್ಲವೆಂದು ಉತ್ತರ ಹೇಳಿದೆ. ಆದರೆ ಯಾವುದಾದರೂ ಒಂದು ವರ್ಗದ ಜಾತಿ ಅಥವಾ ಕೋಮುಗಳನ್ನು ಸಿಂಹಾವಲು ಆಡಳಿತ ನಿರ್ವಹಿಸುವುದೇ ಅಗಲೇ ಅಥವಾ ಆಡಳಿತದಲ್ಲಿ ಒಂದೇ ವರ್ಗದ ಜನರನ್ನು ಕೇಂದ್ರೀಕೃತ ಮಾಡುವುದನ್ನೇ ಆಗಲೇ ತಪ್ಪಿಸಿ ಎಲ್ಲಾ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ದೊರಕುವ ರೀತಿಯಲ್ಲಿ ವ್ಯವಹಾರಗಳನ್ನು ಸರ್ಕಾರ ಮಾಡುವುದು ಒಳ್ಳೆಯದಲ್ಲವೇ?

† ಶ್ರೀ ಡಿ. ದೇವರಾಜ ಅರಸ್ —ವರ್ಗಗಳ ಪ್ರಕಾರವೇ ಮಾಡಬೇಕೆಂದು ಇದ್ದುದೇಚಿಗೆ ಮಾಡಿದ್ದೇವೆ. ಆದರೆ ಇದುವರೆಗೆ ಆ ರೀತಿ ಮಾಡುವುದಕ್ಕಾಗಲಿಲ್ಲ.

ಶ್ರೀ ಕೆ. ಸಿದ್ದಯ್ಯ.—ಇನ್ನೂ ಮುಂದಾದರೂ ಆ ರೀತಿಯಾಗಿ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಇನ್ನು ಮುಂದೆ ಎಲ್ಲಾ ಜಾತಿಗಳನ್ನೂ ಇಟ್ಟೇ ಬಂದು ಲೆಕ್ಕ ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ಬ್ಯಾಕ್‌ವರ್ಡ್ ಕ್ಲಾಸ್ ಎಂದಿರುವುದನ್ನು ಒಪ್ಪಿಕೊಂಡು ಆದರ ಪ್ರಕಾರ ಸರ್ಕಾರದ ಆಜ್ಞೆಯನ್ನು ಮಾಡಿದ್ದೇವೆ. ಅದನ್ನು ಜಾರಿಗೆ ಕೊಡಬೇಕಾದರೆ ಯಾವ್ಯಾವ ವರ್ಗಕ್ಕೆ ಸೇರಿದ ಜನರು ಎಷ್ಟೆಷ್ಟು ಇದ್ದಾರೆಂದು ಪತ್ತೆ ಹಚ್ಚಿ ಕೊಡುತ್ತೇವೆ.

ಶ್ರೀ ಕೊಣಂದೂರು ಲಿಂಗಪ್ಪ.—ಪ್ಲಾಪಿ, ತಮ್ಮ ಸರ್ಕಾರಿ ಆಜ್ಞೆ ಏನು ಹೊರಡಿಸಿದ್ದೀರಿ ಆ ಪ್ರಕಾರ ಬ್ಯಾಕ್ ವರ್ಡ್ ಕ್ಲಾಸಿಗೆ 40 ಪರ್ಸೆಂಟ್ ಮತ್ತು ಪೆಟ್ಟೊಲ್ಡ್ ಕ್ಯಾಸ್ಟ್ಸ್, ಪೆಡ್ಯೂಲ್ಡ್ ಟ್ರೈಬಿಗೆ 18 ಪರ್ಸೆಂಟ್ ಆಗುತ್ತದೆ, ಒಟ್ಟು 58 ಪರ್ಸೆಂಟ್ ಆಗುತ್ತದೆ. ಆದರೆ ಇತ್ತೀಚಿನ ಸುಪ್ರೀಂಕೋರ್ಟಿನ ಒಂದು ತೀರ್ಮಾನದಂತೆ 100ಕ್ಕೆ 50 ಪರ್ಸೆಂಟಿಗಿಂತಲೂ ಹೆಚ್ಚಿಗೆ ರಿಸರ್ವೇಷನ್ ಇರುವುದಕ್ಕಾಗುವುದಿಲ್ಲ ಎನ್ನುವ ಅಭಿಪ್ರಾಯ ಇದೆ. ಇದ್ದರಿಂದ ನೀವು ಹೊರಡಿಸಿರುವ ಆಜ್ಞೆ ರದ್ದುಗೊಳ್ಳುವ ಸಂಭವಗಳಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಇತ್ತೀಚಿನ ಸುಪ್ರೀಂಕೋರ್ಟಿನ ಜಡ್ಜ್‌ಮೆಂಟನ್ನು ನೋಡಿ 50 ಪರ್ಸೆಂಟಿಗಿಂತ ಸ್ವಲ್ಪ ಜಾಸ್ತಿ ಸೋಷಿಯಲ್, ಎಕನಾಮಿಕಲ್ ಬ್ಯಾಕ್‌ವರ್ಡ್ ಇದ್ದವರಿಗೆ ರಿಸರ್ವೇಷನ್ ಮಾಡಿ ಕೊಟ್ಟರೆ ತಪ್ಪಾಗಲಾರದೆಂದು, ಇದನ್ನು ಅವರೂ ಒಪ್ಪುತ್ತಾರೆ ಎಂಬ ಅಧಾರದಿಂದ ಈ ಆಜ್ಞೆಯನ್ನು ಮಾಡಿದ್ದೇವೆ

ಶ್ರೀ ಟಿ. ಆನ್ ಶಾಮಣ್ಣ. ತಾವು ಸೋಷಿಯಲ್ ಎಕನಾಮಿಕಲ್ ಬ್ಯಾಕ್‌ವರ್ಡ್ ಎಂದು ನಿರ್ಧರ್ಶೆ ಮಾಡುವಾಗ ಅನೇಕರು ತಮ್ಮ ವ್ಯಾಮೋಹವನ್ನು ಸಂಯಮದ ರೀತಿಯಲ್ಲಿ ಕೊಡದೇ ಯಾರಿಗೆ ನಿಜವಾಗಿ ಆ ಅನುಕೂಲ ಬೇಕಾಗಿದೆ ಅದು ಅವರಿಗೆ ದೊರಕಲು ಆ ಮಂಡಲದ ತಾವು ನಿರ್ಧರ್ಶೆ ಮಾಡುವಾಗ ಸಂಯಮದ ರೀತಿಯಲ್ಲಿ ನಿರ್ಧರ್ಶೆ ಮಾಡುವುದಕ್ಕೆ ತಮಗೆ ಅಧಿಕಾರಗಳನ್ನು ಕೊಡುವಿರಾ?

ಶ್ರೀ ಡಿ. ದೇವರಾಜ ಅರಸ್.—ಆಲೋಚನೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ —ಇತಿ ಲಿಚೆಗೆ ತಾವು ಹೊರಡಿಸಿರುವ ಆಜ್ಞೆ ಪ್ರಕಾರ ಶೇಕಡ ನೂರಷ್ಟು ರಿಸರ್ವೇಷನ್ ಬ್ಯಾಕ್‌ವರ್ಡ್ ಕ್ಲಾಸಿನವರಿಗೆ ಇಟ್ಟಿದ್ದೀರಿ. ಸುಪ್ರೀಂಕೋರ್ಟಿನ ತೀರ್ಮಾನ ಕೂಡ 50 ಪರ್ಸೆಂಟ್ ಮಾತ್ರ ವಿಂಗಡಿಸಬೇಕೆಂದು ಇದೆ ಎಂದು ಮೊನ್ನೆ ಹಾವನೂರು ಆಯೋಗದವರೂ ಕೂಡ ಬಾಲಾಜಿ ಕೇಸಿನ ತೀರ್ಮಾನದ ಆಧಾರದಮೇಲೆ ಆ ಅಂಶವನ್ನು ಗಮನದಲ್ಲಿಟ್ಟು

ಕೊಂಡು 49ಕ್ಕಿಂತ ಹೆಚ್ಚಿಗೆ ಹಿಂದುಳಿದವರಿಗೆ ಮೀಸಲಿಡಬೇಕೆಂದು ಹೇಳಿಲ್ಲ. ಎಲ್ಲವನ್ನೂ ಕೈಬಿಟ್ಟು 68 ಪರ್ಸೆಂಟ್ ಮೀಸಲಿಡಬೇಕೆಂದು ತಾವು [illegible]ರುವುದರಿಂದ ತಮ್ಮ ಆಜ್ಞೆ ಕಾರ್ಯಗತವಾಗದೇ ಇರುವ ರೀತಿಯಲ್ಲಿ ಆಗುತ್ತದೆ ಎಂಬುದು ತಮಗೆ ತಿಳಿದಿದೆಯೇ?

ಶ್ರೀ ಡಿ. ದೇವರಾಜ ಅರಸ್ —ಇವತ್ತು ಆಜ್ಞೆ ಮಾಡುವುದಕ್ಕಿಂತ ಮುಂಚೆ ಎಲ್ಲವನ್ನೂ ಓದಿ ನೋಡಿದ್ದೇವೆ: ಈ ರೀತಿ ಮಾಡಿದರೂ ತಪ್ಪಾಗಲಿಲ್ಲವೆಂಬ ಅಭಿಪ್ರಾಯ ಅದರಲ್ಲಿದೆ. Purely from the point of view of doing a justice to such classes of people who have been denied the social justice, this has been done. There may be an element of risk. But with best intentions and with best of motives, we have done.

SRI KAGODU THIMMAPPA.—There is an element of risk.

SRI D. DEVARAJ URS. What are we to do? I will reduce it but let us see why should I not do, it. I would like it fight out this only. This is the only way to Social justice. Let me have an apportunity to discuss before the court, when it comes up. I think the hon'ble member will appreciate that stand.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಬ್ಯಾಕ್‌ವರ್ಡ್ ಕ್ಲಾಸಿಗೆ 100ಕ್ಕೆ 60 ಪರ್ಸೆಂಟ್ ರಿಸರ್ವೇಷನ್ ಇಡಬೇಕು ಎನ್ನುವ ಜನ ನಾವು. ಒಂದು ವರ್ಷದ ಹಿಂದೆಯೇ ಹಾವನೂರು ಕಮಿಟಿ ರಿಪೋರ್ಟ್ ಕೊಟ್ಟಿದ್ದಾರೆ. ತಾವು ಅವತ್ತಿನಿಂದ ಏನೂ ಮಾಡದೆ ಚುನಾವಣೆ ಕೇವಲ ಒಂದೆರಡು ವಾರ ಇರಬೇಕಾದರೆ ತಾವು ಈ ಆಜ್ಞೆಯನ್ನು ಹೊರಡಿಸಿರುವುದು ಚುನಾವಣೆಗೋಸ್ಕರ ತಾನೆ.

SRI D. DEVARAJ URS.—I may even say I cannot answer this question because this question does not arise at all but for his education I would like to submit, through you Madam Speaker, if he thinks that in the election they have been defeated merely because of this, O.K. it does not matter. The Government had a right to do it.

SRI KONANDUR LINGAPPA.—We have got a right to expose...

Liquor Shops near Temples etc.

214 SRI K. R. SRINIVASALU NAIDU (Shantinagar)—Will the Minister for Kannada Development and Excise be pleased to state:—

(*a*) whether it has come to the notice of the Government that liquor shops are being opened near the temples, educational Institutions and residential areas;

(*b*) the steps taken to shift such shops;

(*c*) the amount realised in form of excise by the sale of these liquors;

(*d*) the measures taken to prohibit the evils of drinking?